**ಕರ್ನಾಟಕ ಸರ್ಕಾರ**

ಸಂಖ್ಯೆ: ಕಂಇ 158 ಟಿಎನ್‌ಆರ್ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:21.07.2020

# ಆದೇಶ

ವಿಷಯ: ಬೆಂಗಳೂರಿನಲ್ಲಿ ಕೋವಿಡ್-19 ಸಾಂಕ್ರಮಿಕ ಸೋಂಕು ಹರಡುವಿಕೆ ನಿಯಂತ್ರಿಸುವ ಉದ್ದೇಶಕ್ಕಾಗಿ ಕಣ್ಗಾವಲು ಮತ್ತು ಸಾರ್ವಜನಿಕ ಆರೋಗ್ಯ ಪ್ರಯತ್ನಗಳನ್ನು ಹೆಚ್ಚಿಸುವುದು-ಹೊಸ ಕಾರ್ಯತಂಡಗಳ ರಚನೆ

ದಿನಾಂಕ:15.06.2020 ಮತ್ತು ದಿನಾಂಕ:20.06.2020ರ ಸಮ ಸಂಖ್ಯೆಯ ಆದೇಶವನ್ನು ಮುಂದುವರೆಸುತ್ತಾ, ವಿಪತ್ತು ನಿರ್ವಹಣಾ ಕಾಯ್ದೆ, 2005ರ ಸೆಕ್ಷನ್ 24 (ಇ), (ಎಫ್) ಮತ್ತು (ಎಲ್) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕೋವಿಡ್-19 ಸಕಾರಾತ್ಮಕ ರೋಗಿಗಳಿರುವ ಕಂಟೈನ್ಮೆಂಟ್ ವಲಯಗಳಲ್ಲಿ ಕಟ್ಟುನಿಟ್ಟಾದ ಪರಿಧಿಯ ನಿಯಂತ್ರಣ ಮತ್ತು ಶಂಕಿತ ಪ್ರಕರಣಗಳ ಪತ್ತೆಗಾಗಿ ಕಂಟೈನ್ಮೆಂಟ್ ವಲಯಗಳಲ್ಲಿ ಮತ್ತು ಸುತ್ತಮುತ್ತಲಿನ ಸುಮಾರು 100 ಮೀಟರ್ ಪ್ರದೇಶದಲ್ಲಿ ತೀವ್ರ ಸರ್ವೇಕ್ಷಣೆ ಮಾಡುವ ಸಂಬಂಧ ರಚಿಸಲಾಗಿರುವ ಕಾರ್ಯ ತಂಡದ ಸದಸ್ಯರಾದ ಶ್ರೀಮತಿ ದಿವ್ಯ, ಉಪ ಪೊಲೀಸ್ ಆಯುಕ್ತರು, ಸಿ.ಎ.ಆರ್, ಇವರು ವರ್ಗಾವಣೆಗೊಂಡಿರುವುದರಿಂದ ಇವರ ಬದಲಿಗೆ ಡಾ.ಸುಮನ್, ಐಪಿಎಸ್, ಉಪ ಪೊಲೀಸ್ ಆಯುಕ್ತರು, ಸಿಎಆರ್, ಇವರನ್ನು ಈ ಕೆಳಕಂಡಂತೆ ನೇಮಿಸಿ ಆದೇಶಿಸಿದೆ.

| ಕ್ರ. ಸಂ | ಕಾರ್ಯ | ಕಾರ್ಯ ನಾಯಕರು | ತಂಡದ ಸದಸ್ಯರು | ಕೇಂದ್ರೀಕರಿಸಬೇಕಾದ ಅಂಶಗಳು |
|---|---|---|---|---|
| 1 | ನಿಯಂತ್ರಣ ವಲಯಗಳು (Containment Zone) | ಶ್ರೀಮತಿ ಸತ್ಯವತಿ, ಕಾರ್ಯದರ್ಶಿ, ಕೆ.ಪಿ.ಎಸ್.ಸಿ | 1. ಶ್ರೀ ಬಸವರಾಜ್, ವಿಶೇಷ ಆಯುಕ್ತರು, ಬಿಬಿಎಂಪಿ<br>**2. ಡಾ. ಸುಮನ್, ಐ.ಪಿ.ಎಸ್. ಉಪ ಪೊಲೀಸ್ ಆಯುಕ್ತರು, ಸಿಎಆರ್, ಪ್ರಧಾನ ಕಚೇರಿ, ಮೈಸೂರು ರಸ್ತೆ, ಬೆಂಗಳೂರು** | • ಕಟ್ಟುನಿಟ್ಟಾದ ಪರಿಧಿಯ ನಿಯಂತ್ರಣ<br>• ಶಂಕಿತ ಪ್ರಕರಣಗಳ ಪತ್ತೆಗಾಗಿ ಕಂಟೈನ್ಮೆಂಟ್ ವಲಯಗಳಲ್ಲಿ ಮತ್ತು ಸುತ್ತಮುತ್ತಲಿನ ಸುಮಾರು 100 ಮೀಟರ್ ಪ್ರದೇಶದ ತೀವ್ರ ಸರ್ವೇಕ್ಷಣೆ |

**(ತ.ಮ.ವಿಜಯ ಭಾಸ್ಕರ್)**
ಮುಖ್ಯ ಕಾರ್ಯದರ್ಶಿ ಮತ್ತು
ಅಧ್ಯಕ್ಷರು, ರಾಜ್ಯ ಕಾರ್ಯಕಾರಿ ಸಮಿತಿ,
ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.